ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2017-18** **ದಿನಾಂಕ: 14-07-2017**

## ಪತ್ರಿಕಾ ಪ್ರಕಟಣೆ

1.ಜೇಡಿಮಣ್ಣಿನ ರಸಗ್ರಹಣ/ಜನಪದ ಸಾಂಝಿ ಕಾಗದ ಕತ್ತರಿ ಕಲೆ/ಕಂಸಾಳೆ-ಪಟ್ಟದ ಕುಣಿತ/ವಿಜ್ಞಾನ ಕಾರ್ಯಕ್ರಮಗಳಲ್ಲಿ ಎರಡು ದಿನಗಳ ಉಚಿತ ಕಾರ್ಯಾಗಾರ.

ಉದ್ಘಾಟನೆ:
ಎಂ.ಎಸ್. ಮೂರ್ತಿ,
ಅಧ್ಯಕ್ಷರು,
ಕರ್ನಾಟಕ ಲಲಿತಕಲಾ ಅಕಾಡೆಮಿ.

ಅಧ್ಯಕ್ಷತೆ:

ಶ್ರೀಮತಿ ಡಾ. ಅಂಜಲಿ ನಿಂಬಾಳ್ಕರ್, ಅಧ್ಯಕ್ಷರು, ಬಾಲ ಭವನ ಸೊಸೈಟಿ.

ದಿನಾಂಕ: 15-07-2017, ಶನಿವಾರ ಸಮಯ : ಬೆಳಿಗ್ಗೆ 11.30 ಗಂಟೆಗೆ
ಸ್ಥಳ: ಚಟುವಟಿಕೆ ಆವರಣ, ಬಾಲ ಭವನ ಸೊಸೈಟಿ, ಕಬ್ಬನ್ ಉದ್ಯಾನವನ, ಬೆಂಗಳೂರು.

2. ಬೆಳ್ಳಿ ಸಿನಿಮಾ-ಬೆಳ್ಳಿ ಮಾತು

ಮುಖ್ಯ ಅತಿಥಿ:
ರವೀಂದ್ರ ನಾಥ ಸಿರಿವರ, ನಿರ್ದೇಶಕರು

ಅತಿಥಿಗಳು:
ಡಾ: ಬಿ. ಜಯಶ್ರೀ,
ಪದ್ಮಶ್ರೀ ಪುರಸ್ಕೃತ ಹಿರಿಯ ನಟಿ

ಪ್ರೊ. ಎಸ್.ಜಿ. ಸಿದ್ದರಾಮಯ್ಯ,
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಡಾ: ಹಂಸಲೇಖ
ಹಿರಿಯ ಸಂಗೀತ ನಿರ್ದೇಶಕರು

ದಿನಾಂಕ: 15-7-2017 ಶನಿವಾರ, ಸಮಯ: ಸಂಜೆ 4-00 ಗಂಟೆಗೆ
ಸ್ಥಳ: ಚಾಮುಂಡೇಶ್ವರಿ ಸ್ಟುಡಿಯೋ, ಮಿಲ್ಲರ್ಸ್ ರಸ್ತೆ, ಬೆಂಗಳೂರು
ಕಾರ್ಯಕ್ರಮದ ನಂತರ ಚಲನಚಿತ್ರ ಪ್ರದರ್ಶನ: ಕೌದಿ

ಪತ್ರಿಕಾ ಪ್ರಕಟಣೆ

## ಎರಡು ದಿನಗಳ ಉಚಿತ ಕಾರ್ಯಾಗಾರ

ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)

ಬಾಲ ಭವನ ಸೊಸೈಟಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಹಾಗೂ ಇಸ್ರೇ ಸಂಸ್ಥೆ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಜುಲೈ 15 ಮತ್ತು 16 ರಂದು ನಗರದ ಕಬ್ಬನ್ ಉದ್ಯಾನವನದ ಬಾಲ ಭವನ ಸೊಸೈಟಿಯ ಚಟುವಟಿಕೆ ಆವರಣದಲ್ಲಿ ಜೇಡಿನಮಣ್ಣಿನ ರಸಗ್ರಹಣ/ಜನಪದ ಸಾಂಝಿ ಕಾಗದ ಕತ್ತರಿ ಕಲೆ/ಕಂಸಾಳೆ-ಹಬ್ಬದ ಕುಣಿತ/ವಿಜ್ಞಾನ ಕಾರ್ಯಕ್ರಗಳಲ್ಲಿ ಎರಡು ದಿನಗಳ ಉಚಿತ ಕಾರ್ಯಾಗಾರವನ್ನು ಹಮ್ಮಿಕೊಂಡಿದೆ.

ಈ ಕಾರ್ಯಾಗಾರದ ಉದ್ಘಾಟನೆಯನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷ ಡಾ. ಎಂ.ಎಸ್. ಮೂರ್ತಿ ಅವರು ನೆರವೇರಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಾಲ ಭವನ ಸೊಸೈಟಿಯ ಅಧ್ಯಕ್ಷೆ ಶ್ರೀಮತಿ ಡಾ. ಅಂಜಲಿ ನಿಂಬಾಳ್ಕರ್ ಅವರು ವಹಿಸಲಿರುವ ಈ ಕಾರ್ಯಕ್ರಮದಲ್ಲಿ ಬಾಲಭವನ ಸಮಿತಿಯ ಸಭೆ ಸದಸ್ಯರಾದ ಶ್ರೀಮತಿ ಪಾರ್ವತಿ, ಶ್ರೀಮತಿ ಪಾರ್ವತಮ್ಮ, ಗೋಪಾಲ ಮಂಜಪ್ಪ ಹಾಗೂ ಶ್ರೀಮತಿ ಮಲ್ಲಮ್ಮ ಅವರುಗಳು ಉಪಸ್ಥಿತರಿರುವರು.

ಎಸ್‌ಎಂ:ಜೆಡಿ:ಜಿಪಿಆರ್.

## ಕಲಾವಿದ ಎಸ್.ಎಂ. ಪಂಡಿತ್ ಮತ್ತು ಕಲಾವಿಮರ್ಶಕರಾದ ಬಿ.ವಿ.ಕೆ. ಶಾಸ್ತ್ರಿ ಅವರ

## ಜನ್ಮ ಶತಮಾನೋತ್ಸವ ಸಮಾರಂಭ

ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)

ಕರ್ನಾಟಕ ಲಲಿತಕಲಾ ಅಕಾಡೆಮಿ ವತಿಯಿಂದ ನಗರದ ಜೆ.ಸಿ.ರಸ್ತೆಯಲ್ಲಿರುವ ಕನ್ನಡ ಭವನದ ಎರಡನೇ ಮಹಡಿಯಲ್ಲಿರುವ "ವರ್ಣ ಆರ್ಟ್ ಗ್ಯಾಲರಿ" ಯಲ್ಲಿ ಜುಲೈ 20 ರಂದು 11.00 ಗಂಟೆಗೆ ಕಲಾವಿದರಾದ ಎಸ್. ಎಂ. ಪಂಡಿತ್ ಮತ್ತು ಕಲಾವಿಮರ್ಶಕರಾದ ಬಿ. ವಿ. ಕೆ. ಶಾಸ್ತ್ರಿ ಅವರ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ ಕಲಾಶಿಬಿರ, ವಿಚಾರ ಸಂಕಿರಣ ಹಾಗೂ ವಿಮರ್ಶಾ ಕಮ್ಮಟವನ್ನು ಹಮ್ಮಿಕೊಂಡಿದ್ದು, ಈ ಸಂದರ್ಭದಲ್ಲಿ ಎಸ್.ಎಂ. ಪಂಡಿತ್ ಅವರ ನೆನಪಿನ ಚಿತ್ರಕಲಾ ಶಿಬಿರ ಹಾಗೂ ಕಲಾಶ್ರೀ ಎಂ.ಆರ್. ಸತ್ಯನಾರಾಯಣ ಕುಮಾರವ್ಯಾಸಭಾರತ ವಾಚನವನ್ನು ಸಹ ಹಮ್ಮಿಕೊಂಡಿದೆ.

ಸಮಾರಂಭದ ಉದ್ಘಾಟನೆಯನ್ನು ಎಂ.ಇ.ಎಸ್. ಕಾಲೇಜಿನ ಅಧ್ಯಕ್ಷ ಶ್ರೀಮತಿ ವಿಮಲಾ ರಂಗಾಚಾರ್ ಅವರು ನೆರವೇರಿಸಲಿದ್ದಾರೆ.

ಸಮಾರಂಭದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷ ನಾಡೋಜ ಡಾ. ಜೆ.ಎಸ್. ಖಂಡೇರಾವ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷ ಡಾ. ಎಂ. ಎಸ್. ಮೂರ್ತಿ ಅವರು ವಹಿಸಲಿದ್ದಾರೆ.

ಎಸ್‌ಎಂ:ಜೆಡಿ:ಜಿಪಿಆರ್

# <u>ಜುಲೈ 21 ರಂದು ಕಲಾ ವಿಮರ್ಶೆ ಕಮ್ಮಟ</u>

ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)

ಕರ್ನಾಟಕ ಲಲಿತಕಲಾ ಅಕಾಡೆಮಿ ವತಿಯಿಂದ ನಗರದ ಜೆ.ಸಿ.ರಸ್ತೆಯಲ್ಲಿರುವ ಕನ್ನಡ ಭವನದ ಎರಡನೇ ಮಹಡಿಯಲ್ಲಿರುವ "ವರ್ಣ ಆರ್ಟ್ ಗ್ಯಾಲರಿ" ಯಲ್ಲಿ ಜುಲೈ 21 ರಂದು ಬೆಳಿಗ್ಗೆ 10.30 ಗಂಟೆಗೆ ಕಲಾ ವಿಮರ್ಶೆ ಕಮ್ಮಟವನ್ನು ಹಮ್ಮಿಕೊಂಡಿದೆ.

ಹಿರಿಯ ಸಾಹಿತಿ ಕಮ್ಮಟದ ನಿರ್ದೇಶಕ ಓ.ಎಲ್. ನಾಗಭೂಷಣ ಸ್ವಾಮಿ ಅವರು ಕಲಾ ವಿಮರ್ಶೆ ಸ್ವರೂಪ ನೆಲೆಗಳು ಹಾಗೂ ಕರ್ನಾಟಕ ಚಿತ್ರಕಲಾ ಪರಿಷತ್ ಕಲಾ ಪ್ರಾಧ್ಯಪಕ ಡಾ. ಶ್ರೀಧರ್ ಮೂರ್ತಿ ಅವರಿಂದ ಚಿತ್ರಕಲಾ ವಿಮರ್ಶೆ ನಡೆಸಿಕೊಡಲಿದ್ದಾರೆ.

ಈ ಕಲಾ ವಿಮರ್ಶೆ ಕಮ್ಮಟದ ಅಧ್ಯಕ್ಷತೆಯನ್ನು ಕರ್ನಾಟಕ ಲಲಿತ ಕಲಾ ಅಕಾಡೆಮಿ ಅಧ್ಯಕ್ಷೆ ಡಾ. ಎಂ.ಎಸ್. ಮೂರ್ತಿ ಅವರು ವಹಿಸಲಿದ್ದಾರೆ.

ಕಲಾ ಇತಿಹಾಸ ತಜ್ಞರು ಮತ್ತು ಯುನೆಸ್ಕೋ ಫೆಲೋದ ಡಾ ಚೂಡಾಮಣಿ ನಂದಗೋಪಾಲ ಅವರು ನೃತ್ಯ ವಿಮರ್ಶೆಯನ್ನು ಹಾಗೂ ಖ್ಯಾತ ನಾಟಕಕಾರ ಕೆ. ವೈ. ನಾರಾಯಣಸ್ವಾಮಿ ಅವರು ನಾಟಕ ವಿಮರ್ಶೆಯನ್ನು ನಡೆಸಿಕೊಡಲಿದ್ದಾರೆ.

ಅಂದು ಮಧ್ಯಾಹ್ನ ಹಿರಿಯ ಸಾಹಿತಿ ಡಾ. ಬೈರಮಂಗಳ ರಾಮೇಗೌಡ ಅವರಿಂದ ಸೌಂದರ್ಯ ಮೀಮಾಂಸೆ ಹಾಗೂ ಶಿಬಿರಾರ್ಥಿಗಳಿಂದ ಕಲಾವಿಮರ್ಶೆ ಮತ್ತು ಬರವಣಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಕೆಪಿಎಸ್‌ಸಿ ಪರೀಕ್ಷೆ ಕೀ ಉತ್ತರ ಪ್ರಕಟ

## ಆಕ್ಷೇಪಣೆ ಸಲ್ಲಿಸಲು ಅವಕಾಶ

ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ: 17-12-2016 ರ ಅಧಿಸೂಚನೆಯಲ್ಲಿ ಅಧಿಸೂಚಿಸಲಾದ ವಿವಿಧ ಹುದ್ದೆಗಳಿಗೆ ದಿನಾಂಕ: 28-06-2017 ರಂದು ನಡೆಸಿದ ಸಾಮಾನ್ಯ ಅಧ್ಯಯನ ಸ್ಪರ್ಧಾತ್ಮಕ ಪರೀಕ್ಷೆಯ ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಲ್ಲಿನ ಕನ್ನಡ ಭಾಷಾ ಉಪನ್ಯಾಸಕರ ಹುದ್ದೆಗಳ ನಿರ್ದಿಷ್ಟ ಪತ್ರಿಕೆ ಹಾಗೂ ದಿನಾಂಕ: 29-05-

2017 ರಂದು ನಡೆಸಿದ ತಾಂತ್ರಿಕ ಶಿಕ್ಷಣ ಇಲಾಖೆಯ ಕಿರಿಯ ತಾಂತ್ರಿಕ ಶಾಳೆಗಳಲ್ಲಿನ ವಿಜ್ಞಾನ ವಿಭಾಗದಲ್ಲಿ ಉಪನ್ಯಾಸಕರು, ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಲ್ಲಿನ ಇಂಗ್ಲೀಷ್/ಇತಿಹಾಸ ಉಪನ್ಯಾಸಕರು ಹುದ್ದೆಗಳ ನಿರ್ದಿಷ್ಟ ಪತ್ರಿಕೆ ಸ್ಪರ್ಧಾತ್ಮಕ ಪರಿಕ್ಷೆ, ದಿನಾಂಕ 30–05–2017 ರಂದು ನಡೆಸಿದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿನ ರಸಾಯನ ಶಾಸ್ತ್ರಜ್ಞ, ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಲ್ಲಿನ ಲೆಕ್ಕಶಾಸ್ತ್ರ/ ಗಣಿತಶಾಸ್ತ್ರ ಉಪನ್ಯಾಸಕರು ಹುದ್ದೆಗಳ ನಿರ್ದಿಷ್ಟ ಪತ್ರಿಕೆಯ ಸ್ಪರ್ಧಾತ್ಮಕ ಪರೀಕ್ಷೆ, ದಿನಾಂಕ: 31–05–2017 ರಂದು ನಡೆಸಿದ ಔಷಧ ನಿಯಂತ್ರಣ ಇಲಾಖೆಯಲ್ಲಿನ ಫಾರ್ಮಕಾಗ್ನಿಸಿ ಉಪನ್ಯಾಸಕರು, ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿನ ಆಂಗ್ಲ ಭಾಷಾ ಉಪನ್ಯಾಸಕರು, ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಲ್ಲಿನ ವಾಣಿಜ್ಯ ಶಾಸ್ತ್ರ ಉಪನ್ಯಾಸಕರು ಹುದ್ದೆಗಳ ನಿರ್ದಿಷ್ಟ ಪತ್ರಿಕೆಯ ಸ್ಪರ್ಧಾತ್ಮಕ ಪರೀಕ್ಷೆ, ದಿನಾಂಕ: 02–07–2017 ರಂದು ನಡೆಸಿದ ಪೌರಾಡಳಿತ ನಿರ್ದೇಶನಾಲಯದ ಮಹಾನಗರ ಪಾಲಿಕೆಗಳಲ್ಲಿನ/ಸ್ಥಳೀಯ ಸಂಸ್ಥೆಗಳಲ್ಲಿನ ಪರಿಸರ ಅಭಿಯಂತರರು ಹಾಗೂ (ಸಿವಿಎಲ್), ಪೌರಾಡಳಿತ ನಿರ್ದೇಶನಾಲಯದ ಮಹಾನಗರ ಪಾಲಿಕೆಗಳಲ್ಲಿನ/ಸ್ಥಳೀಯ ಸಂಸ್ಥೆಗಳಲ್ಲಿನ ಪರಿಸರ ಅಭಿಯಂತರರು ಹಾಗೂ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯಲ್ಲಿನ ಸಹಾಯಕ ನಿರ್ದೇಶಕರು (ಕಾರ್ಯನಿರ್ವಾಹಕ) ಹುದ್ದೆಗಳ ನಿರ್ದಿಷ್ಟ ಪತ್ರಿಕೆಯ ಸ್ಪರ್ಧಾತ್ಮಕ ಪರೀಕ್ಷೆಯ ಕೀ ಉತ್ತರಗಳನ್ನು ದಿನಾಂಕ: 13–07–2017 ರಂದು ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಿದೆ.

ಕೀ ಉತ್ತರಗಳ ಕುರಿತಂತೆ ಆಕ್ಷೇಪಣೆಗಳನ್ನು ಸಲ್ಲಿಸುವ ಅಭ್ಯರ್ಥಿಗಳು ಅದನ್ನು ಪುಷ್ಟೀಕರಿಸುವ ಆಧಾರಗಳುಳ್ಳ ಪುಸ್ತಕಗಳ ಹೆಸರು, ಲೇಖಕರ ಹೆಸರು, ಪ್ರಕಾಶನದ ಪ್ರತಿ, ವಿಷಯ ಪ್ರಶ್ನೆ ಸಂಖ್ಯೆ ಇತ್ಯಾದಿ ವಿವರಗಳು ಹಾಗೂ ಪ್ರತಿ ಪ್ರಶ್ನೆಗೆ ರೂ 50 ರ ಶುಲ್ಕದೊಂದಿಗೆ (ಐಪಿಒ/ಡಿಡಿ ಮೂಲಕ)" ಇವರಿಗೆ ನಿಗದಿತ ನಮೂನೆಯಲ್ಲಿ ದಇನಾಂಕ:

19–07–2017 ದಿನಾಂಕ : 29–05–2017 ರಂದು ನಡೆಸಿದ ನಿರ್ದಿಷ್ಟ ಪತ್ರಿಕೆಯ ಕೀ-ಉತ್ತರಗಳಿಗೆ ಆಕ್ಷೇಪಣೆ ಸಲ್ಲಿಸಲು ದಿನಾಂಕ: 20–07–2017 ರೊಳಗೆ (ಕಚೇರಿ ವೇಳೆಯಲ್ಲಿ) ಲಿಖಿತ ಮನವಿ ಮೂಲಕ (ದ್ವಿಪ್ರತಿಯಲ್ಲಿ) ಸಲ್ಲಿಸಬಹುದಾಗಿದೆ. ದಿನಾಂಕ: 19–07–2017/20–07–2017 ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಮಹಾಮಸ್ತಕಾಭಿಷೇಕ ಮಹೋತ್ಸವದ ರಾಜ್ಯ ಮಟ್ಟದ ಸಮಿತಿ ರಚನೆ

**ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)**

**ಶ್ರವಣಬೆಳಗೊಳದಲ್ಲಿ 2018 ನೇ ಸಾಲಿನಲ್ಲಿ ಜರುಗಲಿರುವ ಮಹಾಮಸ್ತಕಾಭಿಷೇಕ ಮಹೋತ್ಸವದ ರಾಜ್ಯ ಮಟ್ಟದ ಸಮಿತಿಯಲ್ಲಿ ಕ್ಷೇತ್ರ ಹಾಗೂ ಸಮಾಜ ಪ್ರತಿನಿಧಿಗಳು ಪಟ್ಟಿಯ ಕ್ರಮ ಸಂಖ್ಯೆ (18) ರಲ್ಲಿ ಶ್ರೀ ಹೆಚ್. ಪ್ರಭಾಕರ ಜೈನ್ ಬಿನ್ ಧರಣೇಂದ್ರಯ್ಯ, ಹಂಪಾಪುರ, ಕೆ.ಆರ್. ನಗರ ತಾಲ್ಲೂಕು, ಮೈಸೂರು ಜಿಲ್ಲೆ ಇವರನ್ನು ಹೆಚ್ಚುವರಿ ಸದಸ್ಯರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.**

**ಮಹಾಮಸ್ತಕಾಭಿಷೇಕದ ಮಹೋತ್ಸವದ ರಾಜ್ಯ ಮಟ್ಟದ ಸಮಿತಿಯಲ್ಲಿ ಕ್ಷೇತ್ರದ ಹಾಗೂ ಸಮಾಜದ ಪ್ರತಿನಿಧಿಗಳು ಪಟ್ಟಿಯ ಕ್ರಮ ಸಂಖ್ಯೆ 19 ರಿಂದ ಹಾವೇರಿ ಜಿಲ್ಲೆಯ ಶ್ರೀ ಪ್ರಕಾಶ್ ಎಂ. ಜೈನ್, ಮೈಸೂರಿನ ಎಸ್.ಡಿ. ಓಂಕಾರ್ ಜೈನ್, ಕಲಬುರಗಿಜಿಲ್ಲೆಯ ಅಂಕುಶ ಬಿ. ಶಾಹ, ದಕ್ಷಿಣ ಕನ್ನಡ ಜಿಲ್ಲೆಯ ಸುದರ್ಶನ ಜೈನ್ ಬಿನ್ ಧರ್ಮಪಾಲ ರೈ, ತುಮಕೂರು ಜಿಲ್ಲೆಯ ಬಾಹುಬಲಿ ಬಿನ್ ವಸಂತಕುಮಾರ್ ಹಾಗೂ ವೆಂಕಟೇಶ್ ಜೆ. ಬಿನ್. ಜಯಣ್ಣ, ವಿಜಯಪುರ ಜಿಲ್ಲೆಯ ಅಜೀತ ಆದಿನಾಥ ಧನಶೆಟ್ಟಿ, ಚಿತ್ರದುರ್ಗ ಜಿಲ್ಲೆಯ ಇಳ್ಕಲ್ ವಿಜಯಕುಮಾರ್ ಹಾಗೂ ಎನ್.ಜೆ. ವೆಂಕಟೇಶ್ ಬಿನ್ ಲೇ ಎನ್. ಜಯಣ್ಣ, ಬೆಂಗಳೂರಿನ ಡಿ. ಸುರೇಶ್‌ಕುಮಾರ್, ಬೆಳಗಾವಿ ಜಿಲ್ಲೆಯ ಸುರೇಂದ್ರ ಚೂಡಾಮಣಿ ಅವರು ಸದಸ್ಯರುಗಳಾಗಿದ್ದಾರೆ.**

## ವೈಲ್ಡ್ ವೆದರ್: ಹೀಟ್

ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)

ಜವಾಹರ್‌ಲಾಲ್ ನೆಹರು ತಾರಾಲಯದಿಂದ ಈ ತಿಂಗಳ ಚಲನಚಿತ್ರ "ವೈಲ್ಡ್ ವೆದರ್:ಹೀಟ್" ನ್ನು ಜುಲೈ 16 ರಂದು ಭಾನುವಾರ ಸಂಜೆ 5.00 ಗಂಟೆಗೆ ಪ್ರದರ್ಶಿಸಲಾಗುವುದು. ಅವಧಿ 60 ನಿಮಿಷಗಳಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ದೂರವಾಣಿ: 2237 9725 ಅಥವಾ **http://www.taralaya.org/monthly-movie.php** ನ್ನು ಸಂಪರ್ಕಿಸಹುದಾಗಿದೆ.

# ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಪರಿಶೀಲನಾ ಸಭೆ

ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)

ಪ್ರಧಾನ ಮಂತ್ರಿಗಳ ಹೊಸ 15 ಅಂಶ ಕಾರ್ಯಕ್ರಮದಡಿ ರಾಜ್ಯಮಟ್ಟದ ಸಮಿತಿಯ ಪರಿಶೀಲನಾ ಸಭೆಯನ್ನು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಮಾರ್ಗಸೂಚಿಗಳನ್ವಯ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳಡಿ ಶೇ. 15 ರಷ್ಟು ಅಲ್ಪಸಂಖ್ಯಾತರಿಗಾಗಿ ಮೀಸಲಿರಿಸಬೇಕಾಗಿದ್ದು, ಈ ಕುರಿತು ವಸತಿ ಯೋಜನೆ, ಸಾಲ ವಿತರಣೆ, ನೇಮಕಾತಿಯಲ್ಲಿ ಅಲ್ಪಸಂಖ್ಯಾತರಿಗೆ ಮೀಸಲಾತಿ, ಕೌಶಲ್ಯ ಅಭಿವೃದ್ಧಿ, ಶಾಲೆ ಬಿಟ್ಟಿರುವ ಮಕ್ಕಳನ್ನು ಮರು ಶಾಲೆಗೆ ತರುವುದು, ಅಲ್ಪಸಂಖ್ಯಾತರು ಹೆಚ್ಚಾಗಿ ಇರುವ ಜಿಲ್ಲೆಗಳಲ್ಲಿ ಎಂ.ಎಸ್.ಡಿ.ಪಿ. ಕಾರ್ಯಕ್ರಮದ ಅನುಷ್ಠಾನ ಹಾಗೂ ಕೋಮುಗಲಭೆಗಳನ್ನು ತಡೆಗಟ್ಟುವ ಬಗ್ಗೆ ಮೊಹಮ್ಮದ್ ಮೊಹಸಿನ್, ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ಇವರು ವಿವರಿಸಿದರು.

ಸಭೆಯಲ್ಲಿ ವಿವಿಧ ಇಲಾಖಾ ಕಾರ್ಯಕ್ರಮಗಳ ಗುರಿ ಸಾಧನೆಗಳ ತಖ್ತೆಯನ್ನು ಸಿದ್ದಪಡಿಸುವಂತೆ ಸೂಚಿಸುತ್ತಾ ಅದರಂತೆ ತ್ರೈಮಾಸಿಕ ಪರಿಶೀಲನೆಯನ್ನು ಕೈಗೊಳ್ಳಲು ಸೂಚಿಸಲಾಯಿತು. ಅಲ್ಪಸಂಖ್ಯಾತರಿಗೆ ನೀಡಿರುವ ಸೌಲಭ್ಯಗಳ ವಿವರಗಳನ್ನು ಇಲಾಖೆಗಳು ತಮ್ಮ ತಮ್ಮ ವೆಬ್‌ಸೈಟ್‌ಗಳಲ್ಲಿ ನಮೂದಿಸುವಂತೆ ನಿರ್ದೇಶನ ನೀಡಲಾಯಿತು. ಕೇವಲ ಮೂರು ಜಿಲ್ಲೆಗಳ ಪ್ರಗತಿಯ ಮಾಹಿತಿಯನ್ನು ನೀಡಲಾಗಿತ್ತು, ಎಲ್ಲಾ ಜಿಲ್ಲೆಗಳಲ್ಲೂ ಅಲ್ಪಸಂಖ್ಯಾತ ಫಲಾನುಭವಿಗಳನ್ನು ಗುರುತಿಸಿ ಬ್ಯಾಂಕುಗಳ ಮೂಲಕ ಸಾಲವನ್ನು ನೀಡಲು ಕ್ರಮಕೈಗೊಳ್ಳುವಂತೆ ಜನರಲ್ ಮ್ಯಾನೇಜರ್, ಲೀಡ್ ಬ್ಯಾಂಕ್ (ಸಿಂಡಿಕೇಟ್ ಬ್ಯಾಂಕ್) ಅವರಿಗೆ ತಿಳಿಸಲಾಯಿತು.

ಕೋಮು ಗಲಭೆಗಳಲ್ಲಿ ಬಂಧಿಸಲಾಗಿರುವ ಅಲ್ಪಸಂಖ್ಯಾತ ವ್ಯಕ್ತಿಗಳಿಗೆ ನಿಗಧಿತ ವೇಳೆಯಲ್ಲಿ ಪ್ರಕರಣಗಳನ್ನು ಮುಕ್ತಾಯಗೊಳಿಸುವಂತೆ ಸೂಚಿಸಲಾಯಿತು. ಒಳಾಡಳಿತ ಇಲಾಖೆಯಿಂದ ಮಸೀದಿಗಳ ಸಮೀಕ್ಷೆ ನಡೆಸುವ ಬಗ್ಗೆ ಸುತ್ತೋಲೆ ಹೊರಡಿಸಲಾಗಿತ್ತು. ಈ ಬಗ್ಗೆ ಅಲ್ಪಸಂಖ್ಯಾತರಲ್ಲಿ ಭಯ ಉದ್ಭವಿಸುತ್ತಿದ್ದು, ಸದರಿ ನಿರ್ದೇಶನವನ್ನು ಪರಿಶೀಲಿಸಿ ಹಿಂದಕ್ಕೆ ತೆಗೆದುಕೊಳ್ಳಲು ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇವರಿಗೆ ಸೂಚಿಸಲಾಯಿತು. ಜಿಲ್ಲಾಮಟ್ಟದ ಪರಿಶೀಲನಾ ಸಮಿತಿಗಳ ತ್ರೈಮಾಸಿಕ ಸಭೆಗಳನ್ನು ಕರಮವಾಗಿ ನಡೆಸಿ, ಸಭಾ ನಡಾವಳಿಯನ್ನು ಕಡ್ಡಾಯವಾಗಿ ಅಂತರ್ಜಾಲದಲ್ಲಿ ಅಳವಡಿಸಲು

ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು. ಸಭೆಯಲ್ಲಿ ಅಲ್ಪಸಂಖ್ಯಾತರ ಆಯೋಗ ಮತ್ತು 14 ಇಲಾಖೆಗಳ ಮುಖ್ಯಸ್ಥರರು/ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.